

ಎಡದಿಂದ ಬಲಕ್ಕೆ:

1. ಇಂಥ ವೇಷಕ್ಕೆಲ್ಲ ಸೂಕ್ತವಾದದ್ದು ಮುಂಜಾನೆಯ ಸಮಯ 4
3. ಪರಮಾಪ್ತನಂತೆ ನಟಿಸುತ್ತಿದ್ದಾನೆ ಸೊಕ್ಕು ಹತ್ತಿದವ 3
4. ಮೂಢ ಜನರ ಅಕೃತ್ಯಗಳಿಂದಾಗಿ ಅಲ್ಲಿ ಭೀಕರ ಕ್ಷಾಮ 3
6. ದೇಗುಲವನ್ನು ಪ್ರವೇಶ ಮಾಡಿದ್ದೇ ತಡ, ಮೈ ಮರೆತು ನಿಂತ 4
8. ಇದು ಸವಿಯಾದ ಹಣ್ಣು ಬಿಡುವ ಒಂದು ಬಗೆಯ ಗಿಡ 4
10. ಹೊದ್ದು ಮಲಗಿರುವವರ ಗುಂಪಲ್ಲಿ ಒಬ್ಬ ಭಾರೀ ಹೊಟ್ಟೆಯವ ಇದ್ದಾನೆ 4
12. ನೋವು ನಿವಾರಿಸುವ ಈ ಬಗೆ ಹೊಸ ರೀತಿಯದು 4
16. ಈಗಂತೂ ಸಕಲ ವಸ್ತುಗಳಲ್ಲೂ ಬೆರೆತೇ ಇದೆ, ಅಷ್ಟಿಷ್ಟು ಕೊಳೆ 3
17. ಲಾಗ ಹಾಕುವುದನ್ನು ಕಲಿಯಲೂ ಮುಹೂರ್ತ ನೋಡಬೇಕೇ? 3
18. ಯಾಗ ಕಾರ್ಯವನ್ನು ಆರಂಭಿಸಿರುವವ ಇನ್ನೂ ತರುಣ 4

ಮೇಲಿಂದ ಕೆಳಕ್ಕೆ:

1. ಮತ್ತಾವುದೂ ಸರಿಸಾಟಿ ಇಲ್ಲದಷ್ಟು ಶ್ರೇಷ್ಠ 3
2. ಲಾಡು ಹಂಚಿದ್ದಾಯಿತೆಂದೊಡನೆ ಶುರುವಾಯಿತು ಯುದ್ಧ 3
3. ಪರಿಣಾಮವೇನು ಗೊತ್ತೇ? ಇದು ಓಂಕಾರ 3
5. ಈ ಹೆಸರಿನಲ್ಲಿ ಅಡಗಿರುವ ಗುಟ್ಟೇನು ಗೊತ್ತೇ? 3
6. ಉಪಕಾರ ಮಾಡಲು ಬಂದವನದು ಎಂಥ ಶೌರ್ಯ ನೋಡಿದಿರಾ? 4
7. ವಿಷ ನಿವಾರಕ ಸಿಕ್ಕಿದ್ದು ವಾರಾಂತ್ಯದ ದಿನ 4
8. ಎಲ್ಲರನ್ನೂ ಸೌಮ್ಯಗೊಳಿಸಿದ ನಂತರವಷ್ಟೇ ನೆಮ್ಮದಿ 4
9. ಧನವಂತರಿಗೂ ಸಿಗುವಂತಿಲ್ಲ; ಈತ ದೇವತೆಗಳ ವೈದ್ಯ 4
11. ಸದಾ ದೂಷಿಸುವ ಕೆಲಸ ಕೈ ಬಿಟ್ಟು ಹತ್ತು ವರ್ಷ 3
13. ವ್ಯವಧಾನ ಇಲ್ಲವೆಂಬುದನ್ನು ಎತ್ತಿ ತೋರಿಸುತ್ತಿದೆ ಮುಖ 3
14. ಅವರು ಒದಗಿಸಿದ ಸಾಕ್ಷ್ಯದ ಬಗೆಗೆ ನಂಬಿಕೆಯೇ ಇಲ್ಲ 3
15. ಯಾರ ಗಾಳಕ್ಕೂ ಸಿಗುವಂತಿಲ್ಲ, ಅದು ಭಾರೀ ಗಂಡಾನೆ 3

---

### 12-12-2019 ಉತ್ತರಗಳು

**ಎಡದಿಂದ ಬಲಕ್ಕೆ:**

1.ಸಂಭಾವನೆ 3. ಪ್ರಸಂಗ 4. ರಚನೆ 6. ತಿಳಿಹೇಳು 7. ನಿವೇದನೆ 9. ತಂಪುಜಲ 11. ರಜಾಕಾಲ 13. ರುಚಿಕರ 15. ಕಂದಮೂಲ 17. ಗರೀಬ 18. ವಲ್ಲರಿ 19. ನಿಷ್ಪ್ರಮಣ

**ಮೇಲಿಂದ ಕೆಳಕ್ಕೆ:**

1. ಸಂಗತಿ 2. ನೆರಳು 3. ಪ್ರಸಾದ 5. ನೆನಪು 7. ನಿರಾಧಾರ 8. ನೆಲೆಬಲ 9. ತಂಬೆಲರು 10. ಲಕ್ಷಾಂತರ 12. ಕಾಳಗ 14. ಚಿಕೋರಿ 15. ಕಂಬನಿ 16. ಲವಣ

ಪ್ರಶ್ನಾ೦ಕಣ

## ವೃಷ್ಟಿವನ: ಸ್ವರೂಪ ಏನು?

ವೃಷ್ಟಿವನ ಅಥವಾ ಮಳೆಕಾಡು: ಅದೊಂದು ಬಗೆಯ ಅರಣ್ಯ. ಅತ್ಯಂತ ನಿಬಿಡ, ಅತ್ಯಂತ ವೈವಿಧ್ಯಮಯ, ಅತ್ಯಂತ ವಿಶಿಷ್ಟ, ಅತ್ಯಂತ ವಿಸ್ಮಯಕರ... ಹಾಗೆಲ್ಲ ಆಗಿದ್ದು, ಆದ್ದರಿಂದಲೇ ಅದೇ ಪೃಥ್ವಿಯ ಸರ್ವೋತ್ತಮ ವಿಧದ ಕಾನನ. ಧರೆಯ ಸಮಭಾಜಕದ ಆಸುಪಾಸಿನ ಉಷ್ಣವಲಯದಲ್ಲಿ, ಅಲ್ಲಿನ ವರ್ಷಪೂರ್ತಿ ಬಿಸಿಲಿನ, ನಿತ್ಯ ಸುರಿವ ಮಳೆಯ ಕೃಪೆಯಲ್ಲಿ ಅರಳಿರುವ ವೃಷ್ಟಿವನ ಬುವಿಯ ಅತ್ಯದ್ಭುತ ಜೀವಾವಾರ ಕೂಡ. ಏಕೆಂದರೆ ಮಳೆಕಾಡುಗಳು ಒಟ್ಟಾರೆ ಇಡೀ ಧರೆಯ ನೆಲದ ಶೇಕಡಾ ಆರರಷ್ಟೇ ವಿಸ್ತಾರಕ್ಕೆ ಹರಡಿದ್ದರೂ ಇಡೀ ಜೀವಲೋಕದ ಶೇಕಡಾ ಐವತ್ತಕ್ಕೂ ಅಧಿಕ ಸಸ್ಯ ಪ್ರಭೇದ ಮತ್ತು ಪ್ರಾಣಿ ಪ್ರಭೇದಗಳಿಗೆ ಆಶ್ರಯ ತಾಣವಾಗಿವೆ! ಧರೆಯ 'ಪಚ್ಚೆ ಸಾಮ್ರಾಜ್ಯ'ದ (ಎಂದರೆ ಅಡವಿಗಳ) ಪ್ರಧಾನ ನೆಲೆಯಾಗಿರುವ ವೃಷ್ಟಿವನಗಳ 'ಪಕ್ಷಿನೋಟ'ಗಳ ಸೌಂದರ್ಯ ಅನುಪಮ, ಅವರ್ಣನೀಯ (ಚಿತ್ರ 3).

ವೃಷ್ಟಿವನಗಳ ಅಸೀಮ ಜೀವಿ ವೈವಿಧ್ಯ ಮತ್ತು ದಟ್ಟಣೆಗಳಿಗೆ ಅವುಗಳ ವಿಶಿಷ್ಟ ರಚನಾ ಸ್ವರೂಪವೇ ಮುಖ್ಯ ಕಾರಣ. ವಾಸ್ತವವಾಗಿ ವೃಷ್ಟಿವನ ಬಹು ಪದರಗಳ ಒಂದು ನಿರ್ಮಿತಿ (ಚಿತ್ರ 1, 2). ನೆಲದಿಂದ ಮುಗಿಲನ್ನೇ ಮುಟ್ಟುವಂತೆ ಬೆಳೆದು ಹರಡಿದ ಮಳೆಕಾಡುಗಳಲ್ಲಿ ವಿಭಿನ್ನ ಜೀವಾವಾರಗಳಂತಿರುವ ನಾಲ್ಕು ಪ್ರಧಾನ ಪದರಗಳನ್ನು ಗುರುತಿಸಬಹುದು: 'ಹೊರ ಪದರ, ಚಾವಣಿ ಪದರ, ತಳ ಪದರ ಮತ್ತು ನೆಲ ಪದರ'. ಪ್ರತಿ ಪದರವನ್ನೂ ತಲುಪುವ ಸೂರ್ಯರಶ್ಮಿಯ ಪ್ರಮಾಣ




ವಿಭಿನ್ನ; ಅದಕ್ಕನುಗುಣವಾಗಿ ಆಯಾ ಪದರಗಳಿಗೆ ಹೊಂದಿ ಬೆಳೆದ ಸಸ್ಯಗಳು ಮತ್ತು ಅವನ್ನು ಆಶ್ರಯಿಸಿದ ಪ್ರಾಣಿವರ್ಗಗಳು. ಅದೊಂದು ಸಂಕೀರ್ಣ ಸೋಜಿಗಮಯ ವ್ಯವಸ್ಥೆ.

ಅಡವಿಯ ಚಾವಣಿಯಿಂದ ಹೊರಕ್ಕೆ ನುಗ್ಗಿ, ಅಲ್ಲಲ್ಲಿ ಮೇಲೆದ್ದು ನಿಂತ ಮಹಾ ವೃಕ್ಷಗಳ ಶಿರಗಳು ವೃಷ್ಟಿವನದ 'ಹೊರ ಪದರ'ವನ್ನು ರೂಪಿಸುತ್ತವೆ. ನೆಲದಿಂದ 200 ರಿಂದ 250 ಅಡಿ ಔನ್ನತ್ಯಗಳ ನಡುವೆ ಶಿರ ಅರಳಿಸಿ ನಿಲ್ಲುವ ಈ ವೃಕ್ಷಗಳು ಅಲ್ಲಿನ ಪ್ರಖರ ಬಿಸಿಲು, ಪ್ರಚಂಡ ಗಾಳಿ ಮತ್ತು ಪ್ರಬಲ ಮಳೆ ಹನಿಗಳ ತಾಡನಗಳನ್ನು ಎದುರಿಸಲು ಸೂಕ್ತವಾಗುವಂತೆ ದಪ್ಪನಾದ ಮತ್ತು ದೃಢವಾದ ಎಲೆಗಳನ್ನು ಧರಿಸಿವೆ. ಈ ಪದರದಿಂದ ಕೆಳಗೆ, ನೆಲದಿಂದ 100 ರಿಂದ 200 ಅಡಿ ಎತ್ತರಗಳ ನಡುವಿನ ಸಸ್ಯಾಚ್ಛಾದಿತ ಪದರವೇ 'ಚಾವಣಿ ಪದರ'.

ಸಿರು ಚಾವಣಿಯಂತೆ ದಟ್ಟವಾದ, ಅವಿಚ್ಛಿನ್ನವಾದ ಈ ಪದರವೇ ಗರಿಷ್ಠ ಸಂಖ್ಯೆಯ ಸಸ್ಯಗಳ ಮತ್ತು ಪ್ರಾಣಿಗಳ ಪ್ರಧಾನ ವಸತಿ. ಅಲ್ಲಿಂದ ಕೆಳಕ್ಕೆ ನೆಲದವರೆಗಿನ 'ತಳ ಪದರ'ದಲ್ಲಿ ಅತ್ಯಂತ ಮಂದ ಬೆಳಕು. ವೃಕ್ಷ ಕಾಂಡಗಳನ್ನು ಅಪ್ಪಿ ಮೇಲೇರುವ ಬಳ್ಳಿಗಳು ಮತ್ತು ಕುಬ್ಜ ಗಿಡಮರಗಳೇ ಅಲ್ಲಿ ಅತ್ಯಧಿಕ. ನೆಲ ಪದರದಲ್ಲಂತೂ ಉದುರಿದ ಎಲೆಗಳ, ಹೂವು ಕಾಯಿ ಹಣ್ಣುಗಳ ಮತ್ತು ಮೃತವಾಗಿಯೋ ಮುರಿದೋ ಬಿದ್ದ ವೃಕ್ಷಗಳ, ಕೊಂಬೆ ರೆಂಬೆ ರಾಶಿಗಳ... ಇಂಥವೆಲ್ಲ ಅವಶೇಷಗಳದೇ ಆಚ್ಛಾದನೆ.

■ ಎನ್. ವಾಸುದೇವ್